# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಈಶ್ವರ ಕೆ ವಡಕಾರ, ಅಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ವಳಗಲಿ ಗ್ರಾಮ ಪಂಚಾಯತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪಲೋಕಾಯುಕ್ತ ವರದಿಯ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 306 ಪಬವ 2014, ದಿನಾಂಕ 02.01.2015 ಮತ್ತು ತಿದ್ದುಪಡಿ ಆದೇಶ 16.01.2015
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಉಪಲೋಕ್-1/ಡಿಇ/34/2015/ಎಆರ್‌ಇ-10, ದಿನಾಂಕ 04.09.2017
3) ಸರ್ಕಾರದ ಸಮಸಂಖ್ಯೆಯ ಎರಡನೇ ಕಾರಣ ಕೇಳಿ ನೋಟೀಸ್, ದಿನಾಂಕ 13.12.2017
4) ಶ್ರೀ ಈಶ್ವರ ಕೆ ವಡಕಾರ, ಅಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ವಳಗಲಿ ಗ್ರಾಮ ಪಂಚಾಯತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಉತ್ತರ, ದಿನಾಂಕ 24.02.2018

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, 1) ಶ್ರೀ ಟಿ.ದಿನೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಕುಮಟಾ ತಾಲ್ಲೂಕು ಪಂಚಾಯತಿ 2) ಶ್ರೀ ಅಶೋಕ್ ಎಂ.ಕಳಸ, ಹಿಂದಿನ ಸಹಾಯಕ ಅಭಿಯಂತರರು, ಕುಮಟಾ ತಾಲ್ಲೂಕು ಪಂಚಾಯತಿ ಮತ್ತು 3) ಶ್ರೀ ಈಶ್ವರ ಕೆ ವಡಕಾರ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ವಳಗಲಿ ಗ್ರಾಮ ಪಂಚಾಯತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ಸ್ವೀಕೃತವಾದ ದೂರಿನನ್ವಯ ಕೆಳಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿ ಆದೇಶಿಸಲಾಗಿದೆ.

> "That, DGO-1 Sri T Dinesh, EO, Kumata Taluk Panchayat, DGO-2 Sri Ashok M.Kalasa, Asst. Engineer in Kumata Taluk Panchayat and DGO-3 Sri Eshwar K.Vadakara, the then secretary in Valagali Grama Panchayat in Kumta Taluk of Uttara Kannada District, have committed irregularities and misutilisation, misappropriated the Government funds released under MNREGA scheme for the year 2009-10 with regard to execution of 38 works in the limits of Valagali Grama Panchayat in Kumta Taluk of U.K.District. Not only that, DGOs caused wasteful expenditure under the said scheme. Thereby DGOs being the Government servants failed to maintain absolute integrity besides devotion to duty and acted in a manner unbecoming of Government Servants and thus committed misconduct as enumerated U/R 3(1) of Karnataka Civil Service (Conduct) Rules, 1966."

ಮೇಲೆ ಓದಲಾದ (2) ರಲ್ಲಿ, ತನಿಖಾಧಿಕಾರಿಗಳಾದ ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ರವರು ತನಿಖೆ ನಡೆಸಿ ವರದಿ ಸಲ್ಲಿಸಿದ್ದು, ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರು ರವರ ದಿನಾಂಕ: 04.09.2017 ರ ವರದಿಯಲ್ಲಿ ಶ್ರೀ ಈಶ್ವರ ಕೆ ವಡಕಾರ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ವಳಗಲಿ ಗ್ರಾಮ ಪಂಚಾಯತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಲು ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುತ್ತಾರೆ. ಶ್ರೀ ಟಿ.ದಿನೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಕುಮಟಾ ತಾಲ್ಲೂಕು ಪಂಚಾಯತಿ ರವರು ಮೂಲತಃ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಧಿಕಾರಿಯಾಗಿರುವುದರಿಂದ ಸದರಿಯವರ ವಿರುದ್ಧ ಮಾನ್ಯ ಉಪಲೋಕಾಯುಕ್ತ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಜರುಗಿಸಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಕಳುಹಿಸಲಾಗಿದೆ ಹಾಗೂ ಶ್ರೀ ಅಶೋಕ್ ಎಂ.ಕಳಸ, ಹಿಂದಿನ ಸಹಾಯಕ ಅಭಿಯಂತರರು, ಕುಮಟಾ ತಾಲ್ಲೂಕು ಪಂಚಾಯತಿ ರವರು ಮೃತರಾಗಿರುವ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧದ ಲೋಕಾಯುಕ್ತ ಇಲಾಖಾ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿದೆ.

ಮೇಲೆ ಓದಲಾದ (3) ರಲ್ಲಿ ಪ್ರಕರಣದ ಸಂಬಂಧ ಮಾನ್ಯ ಉಪಲೋಕಾಯುಕ್ತರು ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಶ್ರೀ ಈಶ್ವರ ಕೆ ವಡಕಾರ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ವಳಗಲಿ ಗ್ರಾಮ ಪಂಚಾಯತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರಿಗೆ ಎರಡನೇ ಕಾರಣ ಕೇಳಿ ನೋಟೀಸ್ ನೀಡಲಾಗಿತ್ತು.

ಮೇಲೆ ಓದಲಾದ (4) ರಲ್ಲಿ ರಂದು ಆರೋಪಿತ ನೌಕರರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

1. **ಶ್ರೀ ರಾಮಚಂದ್ರ ಲಿಂಗಪ್ಪಾ ಪಟಗಾರ, ಸಾ: ತಲಗೂಡ ಇವರ ಜಾಗೆಯಲ್ಲಿ ಸಸಿ ನೆಡುವುದು ಈ ಕಾಮಗಾರಿ ಜಾಗೆಯಲ್ಲಿ ಸಸಿಗಳನ್ನು ನೆಟ್ಟಿರುವುದಿಲ್ಲವೆಂದು ನಮೂದಿಸಿರುತ್ತಾರೆ.**
   **ಹೇಳಿಕೆ:–** ಈ ಮೇಲಿನ ಕಾಮಗಾರಿಯು ಜಲಾನಯನ ಇಲಾಖೆ ಹಾಗೂ ಅರಣ್ಯ ಇಲಾಖೆಯಿಂದ ಅನುಷ್ಠಾನಗೊಂಡಿದ್ದು, ಸದರಿ ಕಾಮಗಾರಿ ಜಾಗೆಯಲ್ಲಿ ಸಸಿಗಳನ್ನು ನೆಟ್ಟಿದ್ದು ಇರುತ್ತದೆ. ಹಾಗೂ ಕಾಮಗಾರಿಗೆ ಅನುಗುಣವಾಗಿ ಅಳತೆ ಪುಸ್ತಕದಲ್ಲಿ (M.B.) ತಾಂತ್ರಿಕ ಅಭಿಯಂತರರು ನಮೂದಿಸಿರುವ ಅಳತೆ ಮತ್ತು ವೆಚ್ಚದ ವಿವರಗಳ ಆದಾರದ ಮೇಲೆ ಕೂಲಿ ಪಾವತಿ ಮಾಡಿರುತ್ತೇನೆ.
2. **ಗಜಾನನ ವೆಂಕಟರಮಣ ಹೆಗಡೆಯವರ ಜಾಗೆಯಲ್ಲಿ ಸಸಿ ನಡೆವುದು ಹಾಗೂ ಸಾರ್ವಜನಿಕ ಆಟದ ಮೈದಾನ ಸಮತಲ ಮಾಡುವುದು. ಈ 2 ಕಾಮಗಾರಿಗಳು ಬೇರೆ ಬೇರೆಯಾಗಿದ್ದು, ಸದರಿ ಕಾಮಗಾರಿಗಳು ಅನುಷ್ಠಾನಗೊಂಡಿರುವುದಿಲ್ಲವೆಂದು ಮಾನ್ಯ ಲೋಕಾಯುಕ್ತರವರ ವರದಿಯಲ್ಲಿ ನಮೂದಿಸಿರುತ್ತಾರೆ.**
   **ಹೇಳಿಕೆ:–** ಈ ಮೇಲಿನ ಕಾಮಗಾರಿಗಳು ಬೇರೆ ಬೇರೆ ಜಾಗೆಯಲ್ಲಿ ಅನುಷ್ಠಾನಗೊಂಡಿದ್ದು, ಮೊದಲನೆಯ ಕಾಮಗಾರಿಯು ಶ್ರೀ ಗಜಾನನ ವೆಂಕಟರಮಣ ಹೆಗಡೆರವರ ಜಾಗೆಯಲ್ಲಿ ಅನುಷ್ಠಾನಗೊಂಡಿದ್ದು, ಸದರ ಕಾಮಗಾರಿಯು ಜಲಾನಯನ ಇಲಾಖೆಯಿಂದ ಅನುಷ್ಠಾನಗೊಂಡಿರುತ್ತದೆ. ಹಾಗೂ ಕಾಮಗಾರಿಗೆ ಅನುಗುಣವಾಗಿ ಅಳತೆ ಪುಸ್ತಕದಲ್ಲಿ ನಮೂದಿಸಿದ ನಂತರ ಕೂಲಿಕಾರರ ಬ್ಯಾಂಕ್ ಖಾತೆಗೆ ಕೂಲಿ ಹಣ ಜಮೆ ಮಾಡಿರುತ್ತೇನೆ.
   ಎರಡನೇ ಕಾಮಗಾರಿ ತಲಗೋಡ ಆಲದಕಟ್ಟೆ ಸಾರ್ವಜನಿಕ ಆಟದ ಮೈದಾನ ಸಮತಲ ಮಾಡುವುದು, ಈ ಕಾಮಗಾರಿಯು ಗ್ರಾಮ ಪಂಚಾಯಿತಿಯಿಂದ ಅನುಷ್ಠಾನಗೊಂಡಿದ್ದು, ಕಾಮಗಾರಿ ಸ್ಥಳ ಬೇರೆಯಾಗಿರುತ್ತದೆ ಹಾಗೂ ಅನುಷ್ಠಾನದ ಸಮಯದಲ್ಲಿ ತಾಂತ್ರಿಕ ಅಭಿಯಂತರರು ಸ್ಥಳ ಪರಿಶೀಲಿಸಿ ಅಳತೆ ಪುಸ್ತಕದಲ್ಲಿ ನಮೂದಿಸಿದ ನಂತರ ಕೂಲಿ ಪಾವತಿ ಮಾಡಿರುತ್ತೇನೆ.
3. **ತಲಗೂಡು ರಸ್ತೆಯ ಪಕ್ಕದ ಸಿ.ಡಿ ಯ ಹತ್ತಿರ ಹಳ್ಳದ ಹೂಳೆತ್ತಿ ತಡೆಗೋಡೆ ನಿರ್ಮಾಣ ಈ ಕಾಮಗಾರಿಯು ಗ್ರಾಮ ಪಂಚಾಯಿತಿಯಿಂದ ಅನುಷ್ಠಾನಗೊಂಡಿದ್ದು, ಸದರ ಕಾಮಗಾರಿಯು ಅನುಷ್ಠಾನಗೊಂಡಿರುವ ಕಾಮಗಾರಿ ಸ್ಥಳ ಬೇರೆ ಇರುವುದೆಂದು ಮಾನ್ಯ ಲೋಕಾಯುಕ್ತರು ನಮೂದಿಸಿರುತ್ತಾರೆ.**
   **ಹೇಳಿಕೆ:–** ಈ ಮೇಲಿನ ಕಾಮಗಾರಿಯು ನಿಗಧಿಪಡಿಸಿದ ಸ್ಥಳದಲ್ಲೇ ಅನುಷ್ಠಾನ ಮಾಡಲಾಗಿದ್ದು, ಕಾಮಗಾರಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕದಲ್ಲಿ ನಮೂದಿಸಿದ ನಂತರ ಕೂಲಿ ಹಾಗೂ ಸಾಮಾಗ್ರಿ ಹಣವನ್ನು ನಿಯಮಾನುಸಾರ ಬಟವಡೆ ಮಾಡಿರುತ್ತೇನೆ.
4. **ಹಾರೊಡಿ ಅರಣ್ಯ ಸರ್ವೆ ನಂ.64 ರಲ್ಲಿ ಇಂಗುಗುಂಡಿ ನಿರ್ಮಾಣ ಕಾಮಗಾರಿಯು ವಲಯ ಅರಣ್ಯಾಧಿಕಾರಿ ಗೇರು ಅಭಿವೃದ್ಧಿ ನಿಗಮರವರ ಇಲಾಖೆಯಿಂದ ಅನುಷ್ಠಾನಗೊಂಡಿದ್ದು, ಸದರ ಕಾಮಗಾರಿಯು ಸಮರ್ಪಕವಾಗಿ ನಿರ್ವಹಿಸಿರುವುದಿಲ್ಲವೆಂದು ಮಾನ್ಯ ಲೋಕಾಯುಕ್ತರು ನಮೂದಿಸಿರುತ್ತಾರೆ.**
   **ಹೇಳಿಕೆ:–** ಸದರಿ ಕಾಮಗಾರಿಯು ಸರ್ವೆ ನಂ.64ರ ಅರಣ್ಯ ಪ್ರದೇಶದಲ್ಲಿ 3548 ಇಂಗುಗುಂಡಿ ನಿರ್ಮಾಣ ಮಾಡಲಾಗಿದ್ದು, 2009–10ರಲ್ಲಿ ಅನುಷ್ಠಾನಗೊಂಡಿರುತ್ತದೆ. ಸದರಿ ಕಾಮಗಾರಿಯ ತನಿಖೆಯು 2014–15ನೇ ಸಾಲಿನಲ್ಲಿ ಮಾಡಲಾಗಿದ್ದು, ಆ ವೇಳೆಯಲ್ಲಿ 4ಮಳೆಗಾಲ ಕಳೆದಿರುವದರಿಂದ ಸುಮಾರು ಇಂಗುಗುಂಡಿಗಳು ಮಳೆಯ ರಭಸಕ್ಕೆ ತುಂಬಿಕೊಂಡಿದ್ದು ಇರುತ್ತದೆ.
5. **ತಲಗೇರಿ (ಕಲಕೇರಿ) ಅರಣ್ಯ ಸರ್ವೆ ನಂ.190ರಲ್ಲಿ ಕಳೆ ತೆಗೆಯುವುದು ಕಾಮಗಾರಿಯ ತಪಾಸಣಾ ವೇಳೆಯಲ್ಲಿ ಕಳೆ ತೆಗೆದಿರುವುದಿಲ್ಲವೆಂದು ಮಾನ್ಯ ಲೋಕಾಯುಕ್ತರವರು ನಮೂದಿಸಿರುತ್ತಾರೆ.**
   ಹೇಳಿಕೆ:– ಸದರಿ ಕಾಮಗಾರಿಯು ಸರ್ವೆ ನಂ.190ರಲ್ಲಿ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಇಲಾಖೆಯಿಂದ ಅನುಷ್ಠಾನಗೊಂಡಿದ್ದು, ಸದರ ಕಾಮಗಾರಿಯು 2009–10ನೇ ಸಾಲಿನಲ್ಲಿ ಅನುಷ್ಠಾನಗೊಂಡಿದ್ದು, ಮಾನ್ಯ ಲೋಕಾಯುಕ್ತರವರು 2014–15ರಲ್ಲಿ ಕಾಮಗಾರಿ ತಪಾಸಣೆ ಮಾಡಿರುತ್ತಾರೆ. ತಪಾಸಣಾ ವೇಳೆಯಲ್ಲಿ ಗೇರು ಗಿಡ ಇರುವ ಜಾಗೆಯು ದಟ್ಟವಾದ ಕಳೆ ಬೆಳೆದಿದ್ದು ಇರುತ್ತದೆ. 2009–10ರಲ್ಲಿ ಕಾಮಗಾರಿ ಪ್ರಾರಂಭಿಸಿದ ವೇಳೆಯಲ್ಲಿನ ಛಾಯಾ ಚಿತ್ರಗಳನ್ನು ಲಗತ್ತಿಸಿರುತ್ತೇನೆ.

6. **ತಲಗೂಡ ಅಣೆಕಟ್ಟಿನಿಂದ ದೇರ್ವಗಿ ಬ್ರಿಡ್ಜ ವರೆಗೆ ಹಳ್ಳದ ಹೂಳೆತ್ತುವ ಕಾಮಗಾರಿಯು ಮಾನ್ಯ ಲೋಕಾಯುಕ್ತರವರು ತಪಾಸಣಾ ವೇಳೆಯಲ್ಲಿ ಸದರಿ ಕಾಮಗಾರಿ ಅನುಷ್ಠಾನ ಆಗಿರುವುದಿಲ್ಲವೆಂದು ನಮೂದಿಸಿರುತ್ತಾರೆ.**

   **ಹೇಳಿಕೆ:–** ಸದರ ಕಾಮಗಾರಿಯು ಗ್ರಾಮ ಪಂಚಾಯಿತಿಯಿಂದ ಅನುಷ್ಠಾನಗೊಂಡಿದ್ದು, ಕಾಮಗಾರಿಗೆ 2 ಅಂದಾಜು ಪತ್ರಿಕೆಗಳನ್ನು ಮಾಡಲಾಗಿರುತ್ತದೆ. (ಭಾಗ–1 ಮತ್ತು ಭಾಗ – 2) ಪ್ರತಿಯೊಂದು ಅಂದಾಜು ಪತ್ರಿಕೆಗೆ 3,50,000/– ರೂ ಒಟ್ಟು 2 ಅಂದಾಜು ಪತ್ರಿಕೆಗೆ ರೂ.7,00,000/– (ಏಳು ಲಕ್ಷ ರೂಪಾಯಿಗಳು ) ಗಳನ್ನೊಳಗೊಂಡ ಅಂದಾಜು ಪತ್ರಿಕೆ ತಯಾರಿಸಿ, ರೂ. 53,635/– ರೂ ಕೂಲಿ ಹಣ ಪಾವತಿಸಿರುತ್ತೇನೆ ಹಾಗೂ ರೂ.2,24,838/– ಸಾಮಾಗ್ರಿ ಒಟ್ಟು ರೂ.2,78,473/– ಹಣ ಪಾವತಿಸಿರುತ್ತೇನೆ. ಕಾಮಗಾರಿಯು ಸಮರ್ಪಕವಾಗಿ ನಿರ್ವಹಿಸಿದ್ದು ಇರುತ್ತದೆ.

7. **ಉರುಕೇರೆ 101 ಜಟಕನ ಮನೆಯಿಂದ ಕೆಳಗಿನ ಹರಿಜನ ಕೇರಿಯವರೆಗೆ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಯು ಗ್ರಾಮ ಪಂಚಾಯಿತಿಯಿಂದ ಅನುಷ್ಠಾನಗೊಂಡಿದ್ದು, ಸದರ ಕಾಮಗಾರಿಯ ತಪಾಸಣಾ ವೇಳೆಯಲ್ಲಿ ಮಾನ್ಯ ಲೋಕಾಯುಕ್ತರವರು ಸ್ಥಳದಲ್ಲಿ ಕಾಮಗಾರಿ ಅನುಷ್ಠಾನ ಮಾಡದೇ ಖರ್ಚನ್ನು ಭರಿಸಿರುತ್ತಾರೆಂದು ನಮೂದಿಸಿರುತ್ತಾರೆ.**

   **ಹೇಳಿಕೆ:–** ಈ ಮೇಲಿನ ಕಾಮಗಾರಿಯು 2009–10ನೇ ಸಾಲಿನಲ್ಲಿ ನಿಖರವಾದ ಸ್ಥಳದಲ್ಲಿ ಅನುಷ್ಠಾನಗೊಳಿಸಿದ್ದು, ತಾಂತ್ರಿಕ ಅಭಿಯಂತರರು ಅಳತೆ ಪುಸ್ತಕದಲ್ಲಿ ನಮೂದಿಸಿದ ನಂತರ ಕೂಲಿಕಾರರಿಗೆ ಕೂಲಿ ಪಾವತಿಸಿರುತ್ತೇನೆ.

8. **ಉಂಚಗಿ ಕೂಡಿಕಂಟ ಹಳ್ಳಕ್ಕೆ ತಡೆಗೋಡೆ ನಿರ್ಮಾಣ ಕಾಮಗಾರಿಯು ಗ್ರಾಮ ಪಂಚಾಯಿತಿಯಿಂದ ಅನುಷ್ಠಾನ ಮಾಡಿದ್ದು, ಸದರ ಕಾಮಗಾರಿಯು ಮಾನ್ಯ ಲೋಕಾಯುಕ್ತರವರು ತಪಾಸಣಾ ವೇಳೆಯಲ್ಲಿ ಕಾಮಗಾರಿಯ ಪೂರ್ಣಗೊಂಡಿರುವುದಿಲ್ಲವೆಂದು ನಮೂದಿಸಿರುತ್ತಾರೆ.**

   **ಹೇಳಿಕೆ:–** ಸದರ ಕಾಮಗಾರಿಯು ಗ್ರಾಮ ಸಭೆಯಲ್ಲಿ ಅನುಮೋದಿಸಿ ಕ್ರಿಯಾ ಯೋಜನೆಯಲ್ಲಿ ಅನುಮೋದನೆ ಪಡೆದ ನಂತರ ಕಾಮಗಾರಿ ಪ್ರಾರಂಬಿಸಲಾಗಿದ್ದು, ಸದರ ಕಾಮಗಾರಿ ಪ್ರಾರಂಭಿಸಿದ ನಂತರ ಊರಿನ ಜನರಿಂದ ಕಾಮಗಾರಿ ಪ್ರಾರಂಭಿಸಬಾರದೆಂದು ತಕರಾರು ಬಂದಿದ್ದಕ್ಕೆ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಲಾಯಿತು ಹಾಗೂ ಎಷ್ಟು ಪ್ರಮಾಣದ ಕೆಲಸ ಆಗಿದೆಯೋ ಅಷ್ಟಕ್ಕೆ (42000) ಕೂಲಿ ಹಣ ಪಾವತಿಸಲಾಗಿರುತ್ತದೆ. ಆದ್ದರಿಂದ ಕಾಮಗಾರಿಯನ್ನು ಸಂಪೂರ್ಣವಾಗಿ ಮುಗಿಸಲು ಆಗಿರುವುದಿಲ್ಲ.

   ಈ ಮೇಲಿನಂತೆ ಕ್ರ.ಸಂ. 1, 2, 4 ಹಾಗೂ 5 ಈ ಕಾಮಗಾರಿಗಳು ಕರ್ನಾಟಕ ಗೇರು ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಂಡಿದ್ದು, ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾಮಗಾರಿಯ ಅಳತೆ ಮತ್ತು ವೆಚ್ಚಗಳನ್ನು ತಾಂತ್ರಿಕ ಅಭಿಯಂತರರು, ಜಲಾನಯನ ಇಲಾಖೆ ರವರು ಅಳತೆ ಪುಸ್ತಕದಲ್ಲಿ ನಮೂದಿಸಿರುತ್ತಾರೆ.

   ಕ್ರ.ಸಂ. 3, 6, 7, ಮತ್ತು 8 ಈ ಕಾಮಗಾರಿಗಳು ಗ್ರಾಮ ಪಂಚಾಯಿತಿಯಿದಂದ ಅನುಷ್ಠಾನಗೊಳಿಸಿದ್ದು, ಪಂಚಾಯತ್ ರಾಜ್ ಇಂಜಿನಿಯರಿಂದ ಉಪವಿಭಾಗ, ಕುಮಟಾ ತಾಲ್ಲೂಕು ರವರು ಕಾರ್ಯನಿರ್ವಹಣಾ ಏಜೆನ್ಸಿಯಾಗಿರುತ್ತಾರೆ. ಸದರಿ ಇಲಾಖೆಯ ಕಿರಿಯ ಅಭಿಯಂತರರು ಕಾಮಗಾರಿ ಪರಿಶೀಲನೆ ಮಾಡಿ, ಅಳತೆ ಪುಸ್ತಕದಲ್ಲಿ ಕಾಮಗಾರಿಯ ಅಳತೆ ಮತ್ತು ವೆಚ್ಚಗಳನ್ನು ದಾಖಲಿಸಿರುತ್ತಾರೆ.

   ಕಾಮಗಾರಿಯ ಗುಣಮಟ್ಟ ಪರಿಶೀಲನೆ ನಡೆಸಿ, ಕಾಮಗಾರಿ ಅನುಷ್ಠಾನಗೊಂಡ ಪ್ರಮಾಣದಲ್ಲಿ ಅಳತೆ ನಮೂದಿಸಿವುದು, ವೆಚ್ಚದ ವಿವರಗಳನ್ನು ನಮೂದಿಸುವುದು ತಾಂತ್ರಿಕ ಸಿಬ್ಬಂದಿಯ ಜವಾಬ್ದಾರಿಯಾಗಿರುತ್ತದೆ. ಗ್ರಾಮ ಪಂಚಾಯತಿಯು ಅನುಷ್ಠಾನ ಇಲಾಖೆಯಾಗಿದ್ದು, ಕಾರ್ಯನಿರ್ವಹಣಾ ಇಲಾಖೆಯ ತಾಂತ್ರಿಕ ಸಿಬ್ಬಂದಿ ಅಳತೆ ಪುಸ್ತಕದಲ್ಲಿ ನಮೂದಿಸಿರುವ ಅಳತೆ ಮತ್ತು ವೆಚ್ಚಗಳ ಆಧಾರದ ಮೇಲೆ ಕಾಮಗಾರಿ ಕೂಲಿ ಮತ್ತು ಸಾಮಗ್ರಿ ವೆಚ್ಚ ಮಾಡಿರುತ್ತೇನೆ. ಕಾಮಗಾರಿಗಳು ಸಂಪೂರ್ಣವಾಗಿ ಅನುಷ್ಠಾನಗೊಂಡಿರುತ್ತವೆ. ತನಿಖಾ ವೇಳೆಯಲ್ಲಿ ಕಾಮಗಾರಿ ಪರಿಶೀಲನೆ ಬಗ್ಗೆ ಗ್ರಾಮ ಪಂಚಾಯತಿಗೆ ಮಾಹಿತಿ ನೀಡದೆ, ಏಕಪಕ್ಷೀಯವಾಗಿ ತನಿಖೆ ನಡೆಸಿರುತ್ತಾರೆ. ಮೇಲೆ ನಮೂದಿಸಿದ ಎಲ್ಲಾ ಕಾಮಗಾರಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು (ಅಂದಾಜು ಪತ್ರಿಕೆ, ಅಳತೆ ಪುಸ್ತಕ, ಕಾಮಗಾರಿಗಳ ಹಂತವಾರು ಛಾಯಾ ಚಿತ್ರಗಳು) ಸಲ್ಲಿಸಿದ್ದು, ನನ್ನ ಮೇಲೆ ಮಾಡಿರುವ ಆಪಾದನೆಗಳನ್ನು ಕೈಬಿಡಬೇಕೆಂದು ಮಾನ್ಯರಲ್ಲಿ ಗೌರವಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇನೆ.”

ಸದರಿ ಪ್ರಕರಣದ ಕುರಿತು ವಿಚಾರಣೆ ನಡೆಸಲು ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ರವರು ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ವಿಚಾರಣಾ ವರದಿಯ ಪ್ರಮುಖ ಅಂಶಗಳನ್ನು ಈ ಕೆಳಕಂಡಂತೆ ಪುನರುಚ್ಛರಿಸಿದೆ:-

"54. The evidence of PW3 and his report clearly shows that in Urukeri Higher Primary School play ground development work was not done, in the development of land belonging to Ramachandra Mahadeva Madiwala R/o Urukeri, manure pit was formed and no other work is done. But in the measurement book, more measurement is shown. The development work near Sri Nagesh Venkataramana Bhat's house, except forming a pond, no other development work was done. But in the measurement book, more measurement is mentioned. In Urukeri Sy.No. 328, trench work was not properly done.

55. In the drainage work and protection walls by the side of roads situated at valagalli gram panchayath, work was not done as per the measurement mentioned in the measurement book. In the land development belonging to land of Narayana R/o Talagoda village, it is mentioned in the measurement book that a new manure pit was formed but manure pit was already existing. In the land of Sri. Ramachandra Lingappa Patagara R/o Talagoda village, saplings were not planted as shown in the measurement book but expenditure of Rs. 6,478/- was shown.

56. In the land belonging to Urukeri Mastar mane Sri. Gajanana Venkataramana He gde, saplings was not planted as shown in the measurement book, only 10 to 15 plants were alive. In leveling public play ground near Talagoda Aladakatte, the work was not done as shown in measurement book. But expenditure of Rs. 3,91,270/- was shown. While executing work, the farm pond was partially closed.

57. In desilting and protection of wall work near talagoda road, the work was not properly done as recorded in the measurement book, but expenditure of Rs. 3,94,270/- was shown. In Haradi forest Sy.no. 64, in farm pond work, actual measurement was 6 feet in length, 1 ½ feet in width and 2 feet in depth. But in M.B. it is mentioned as 2.00x6.00x6.60 meters each for 3548 farm ponds. But the I.O did not find these number of farm ponds. Many of the farm ponds were partially closed.

58. In Haradi forest Sy.No 64 and 21 clearing of thorny bush work, work was not done as shown in measurement book. In the Talageri forest, Sy.No. 190 measuring 50 hectares, 50 farm ponds were formed, but some of the farm ponds were partially closed. In the measurement book, DGOs have shown as 889 farm ponds were formed. In the Talageri forest sy.no 190, in the removal of thorny bush work, though there were no thorny bushes, an expenditure of Rs. 6,510/- was shown.

59. In desilting and protection wall work from talagoda bridge to devagiri bridge, work was not done as shown in measurement book.but an expenditure of Rs. 4,16,630/- was shown. In desilting and protection wasll near Urukeri Abbimane, work was not done as per expenditure shown. In leveling Urukeri Abbi public play ground, work was not done as per expenditure shown. In the road from Urukeri 101, jatakana mane to horijana keri, road work was not at all done, but expenditure of Rs. 1,05,500/- was shown. In desilting work and protection wall work at unchagi kodikanta, the work was incomplete, but expenditure of Rs. 43,000/- was shown.

60. The oral and documentary evidence on record clearly reveals that the DGOs 1 to 3 have committed irregularities and misutilization, misappropriated the Government funds released under MNREGA scheme for the year 2009-10 with regard to execution of 38 works in the limits of Valagali Gram Panchayath in Kumta Taluk of U.K District and have caused wasteful expenditure under the said scheme.

Thereby the DGOs 1 to 3 being Government servants have failed to maintain absolute integrity besides devotion to duty and acted in a manner unbecoming of the Government servants. Hence, i proceed to answer Point NO.1 in the affirmative."

ಸರ್ಕಾರವು ಪರಿಶೀಲಿಸಿ, ಆರೋಪದ ತೀರ್ವತೆಗೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಶ್ರೀ. ಈಶ್ವರ ಕೆ ವಡಕಾರ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(vi) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ "ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ" ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಶ್ರೀ. ಈಶ್ವರ ಕೆ ವಡಕಾರ, ಇವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ. ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ ಶ್ರೀ. ಈಶ್ವರ ಕೆ ವಡಕಾರ, ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ವಳಗಲಿ ಗ್ರಾಮ ಪಂಚಾಯಿತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(vi) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ "ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ" ದಂಡನೆ ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 880 ಗ್ರಾಪಂಕಾ 2017, ಬೆಂಗಳೂರು, ದಿನಾಂಕ: 07.04.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತ ಶಿಫಾರಸ್ಸಿನನ್ವಯ, ಶ್ರೀ. ಈಶ್ವರ ಕೆ ವಡಕಾರ, ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ವಳಗಲಿ ಗ್ರಾಮ ಪಂಚಾಯಿತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(vi) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ "ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ" ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

9/4/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ–1 ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು ವಿಚಾರಣೆಗಳು–10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಉತ್ತರ ಕನ್ನಡ ಜಿಲ್ಲಾ ಪಂಚಾಯತಿ, ಕಾರವಾರ.
6) ಕಾರ್ಯನಿರ್ವಾಹಕ ಅಧಿಕಾರಿ, ಕುಮಟಾ ತಾಲ್ಲೂಕು ಪಂಚಾಯತಿ, ಕುಮಟಾ, ಉತ್ತರ ಕನ್ನಡ ಜಿಲ್ಲೆ. (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
7) ಶ್ರೀ. ಈಶ್ವರ ಕೆ ವಡಕಾರ, ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ವಳಗಲಿ ಗ್ರಾಮ ಪಂಚಾಯಿತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
8) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.